1959-60ನೆಯ ಸಾಲಿನಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನು ನೋಡಿದರೆ ಟೆಕ್ನಿಕಲ್ ಉತ್ತರ ಇದ್ದ ಹಾಗೆ ಕಾಣುತ್ತದೆ. ಇದರಲ್ಲಿ ಯಾವುದು ಸರಿ?

†ಶ್ರೀ ಅಣ್ಣಾರಾವ್ ಗಣಮುಖಿ.—ಅವರು 13145 ರೂಪಾಯಿಗಳನ್ನು ಕೇಳಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅದನ್ನು ಯಾವ ತಿಂಗಳಿನಲ್ಲಿ ಕೊಡಬಹುದು?

ಶ್ರೀ ಅಣ್ಣಾರಾವ್ ಗಣಮುಖಿ.—ಅವರ ಕಡೆಯಿಂದ ಲೆಕ್ಕ ಕಳಿಸಿದ್ದಾರೆ. ಡಿ.ಪಿ.ಐ.ಯಿಂದ ರಿಪೋರ್ಟ್ ಬಂದ ಮೇಲೆ ಕೊಡುತ್ತೇವೆ.

ಶ್ರೀ ಟಿ. ಕೆ. ಕಂಬಳಿ.—ಪ್ರಶ್ನೆ (*b*)ಗೆ ಉತ್ತರವಾಗಿ ಹೇಳಿದ್ದೀರಿ, ಪ್ರತಿ ವರ್ಷವೂ ಆ ವರ್ಷದ ಅವಧಿಯಲ್ಲೇ ಅನುದಾನವನ್ನು ಮಂಜೂರು ಮಾಡುತ್ತಿದ್ದೇವೆಂದು. ಆದರೆ 1958-59ನೆಯ ವರ್ಷದ ಅನುದಾನವನ್ನು 1959-60ನೆಯ ಸಾಲಿನಲ್ಲಿ ಕೊಟ್ಟಿದ್ದೀರಿ. ಹೀಗೆ ತಡಮಾಡಿ ಕೊಡುವುದರಿಂದ ತೊಂದರೆ ಯಾಗುತ್ತದೆ. ಆದುದರಿಂದ ಒಂದು ವರ್ಷ ಮೊದಲೇ ಅಡ್ವಾನ್ಸ್ ಗ್ರಾಂಟ್ ಕೊಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಜುಲೈ ಮತ್ತು ಡಿಸೆಂಬರ್ ತಿಂಗಳಲ್ಲಿ ಎರಡು ಕಂತುಗಳಲ್ಲಿ ಅಡ್ವಾನ್ಸ್ ಗ್ರಾಂಟು ಕೊಡುತ್ತೇವೆ.

Starting of Neera Centres in the State.

*Q.—104. Sri S. MUNI RAJU (Chikkaballapur).—

Will the Government be pleased to state:—

(*a*) when did the Government decide to sell Neera in the State;

(*b*) steps, if any, taken in implementing this decision?

A.—Sri N. RACHIAH (Minister for Agriculture, Excise and Social Welfare).

(*a*) In the Bombay and Madras Karnatak areas, Neera was being sold already at the time of integration (1st November 1956) and this is being continued in those areas. In the dry districts of the old Mysore State and in Ramanagaram and Channapatna taluks, the Scheme was introduced in general, according to the orders issued in May, 1958, but the Neera Centres began to function generally from 1st July 1959. Neera was being sold in Davangere for some time soon after Chitradurga district went dry.

(*b*) For the dry districts of the old Mysore area, *viz.*, Kolar, Tumkur, Chitradurga, Chickmagalur, Shimoga, Bellary and Hassan, seven Junior Excise Inspectors and 52 Tree Markers (7) for each dry district and 3 for Ramanagaram and Channapatna taluks) have been sanctioned.

The draft Neera Rules regarding administration of the Scheme are being finalised. Till these new rules are notified the administration in the areas of the old Mysore State will be in the hands of the Excise Commissioner, Khadi Board being entrusted with supervision. Licensing of Neera Centres and Sub-Centres has however been ordered to be subject to scrutiny and investigation by the Excise Commissioner, Deputy Commissioner, Registrar of Co-operative Societies and the Khadi Board and subject to approval of Government. In Bombay and Madras Karnataka, the administration is according to local laws.

ಶ್ರೀ ಎಸ್. ಮುನಿರಾಜು.—ಈಗ ಸದ್ಯದಲ್ಲಿ ನೀರಾಕ್ಕೆ ಸಂಬಂಧಪಟ್ಟಂತೆ ಏನಾದರೂ ನಿಬಂಧನೆಗಳು ಇವೆಯೇ?

†ಶ್ರೀ ಎನ್. ರಾಚಯ್ಯ.—ಇಲ್ಲಿಯತನಕ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇರಲಿಲ್ಲ. ಮೊದಲು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಗ್ರಾಂಟು ಮಾಡುತ್ತಿದ್ದ ಕಾರಣ ಏನು ರೂಲ್ಸ್ ಅನುಸರಿಸುತ್ತಿದ್ದರು ಎಂಬುದು ಗೊತ್ತಿಲ್ಲ. ಪಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡುತ್ತೇನೆ.

Sri G. VENKATAI GOWDA.—Is it not a fact that representations have been made to the Government for withdrawing permission given to the neera centres?

Sri N. RACHIAH.—There are some representations made to Government.

Sri G. VENKATAI GOWDA.—Is it to give permision or to withdraw permision?

Sri N. RACHIAH.—The Government have not taken any decision in the matter.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ನೀರಾ ಎಲ್ಲೆಲ್ಲಿ ಮಾರಾಟ ಮಾಡುತ್ತಾರೆ, ಎನ್ನುವ ವಿಷಯದಲ್ಲಿ ತಮಗೆ ಮಾಹಿತಿ ಇಲ್ಲ ಎಂದು ತಿಳಿದು ಕೊಳ್ಳೋಣವೇ?

ಶ್ರೀ ಎನ್. ರಾಚಯ್ಯ.—ನೀರಾ ಕೇಂದ್ರಗಳನ್ನು ಸ್ಥಾಪನೆಮಾಡುವ ವಿಚಾರದಲ್ಲಿ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನವರು ಸರ್ಕಾರದ ಅನುಮತಿ ಇಲ್ಲದೆ ನಾನಾ ಕಡೆಗಳಲ್ಲಿ ಸ್ಥಾಪನೆಮಾಡಿದುದರಿಂದ ಪಾನನಿರೋಧ ಕಾನೂನಿಗೆ ಸ್ವಲ್ಪ ಧಕ್ಕೆ ಬರುವಂತೆ ಸರ್ಕಾರಕ್ಕೆ ಕಂಡುಬಂದದ್ದರಿಂದ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಯೋಚನೆಮಾಡಿ ಒಂದು ತೀರ್ಮಾನ ತೆಗೆದುಕೊಳ್ಳೋಣ ಎನ್ನುವ ದೃಷ್ಟಿಯಿಂದ ಅದನ್ನು ಎಕ್ಸೈಜ್ ಕಮೀಷನರಿಗೆ, ಯಾವ ಕೇಂದ್ರಗಳಲ್ಲೂ ಕೂಡ ನೀರಾಕ್ಕೆ ಹೊಸದಾಗಿ ಲೈಸನ್ಸ್ ಕೊಡಬಾರದು, ಅಕಸ್ಮಾತ್ತಾಗಿ ಕೊಟ್ಟಿರುವ ಕಡೆ ರಿನ್ಯೂ ಮಾಡಬಾರದು ಎಂದು ಆದೇಶ

(ಶ್ರೀ ಎಚ್. ರಾಚಯ್ಯ)

ವನ್ನು ಕೊಟ್ಟಿದ್ದೇವೆ. ವರದಿ ತರಿಸಿಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಡಿ. ಕೊಠಾವಳೆ.—ಯಾವ ರೀತಿಯಾಗಿ ಪ್ರೊಹಿಬಿಷನ್ ಪಾಲಿಸಿಗೆ ಧಕ್ಕೆ ಬರುತ್ತದೆ ?

ಶ್ರೀ ಎನ್. ರಾಚಯ್ಯ.—ನೀರಾ ಬದಲು ಟಾಡಿ ಮತ್ತು ಸೇಂದಿ ಮಾರಿದರೆ ಧಕ್ಕೆ ಬರುತ್ತದೆ.

Sri V. SRINIVASA SHETTY.—In view of the fact that a very large number of toddy tappers in South Kanara and other parts of the State are unemployed, will the Government revise their policy and grant permission to such of those people who want licence for opening neera parlours as a counter measure to large scale distillation that is going on ?

Sri N. RACHIAH.—I have already answered that Government is seized of the matter and we are examining and considering this question whether to give or not to give such licence.

ಶ್ರೀ ಬಿ. ಎನ್. ಬೋರಣ್ಣಗೌಡ.—ನೀರಾ ಕೇಂದ್ರಗಳನ್ನು ಮುಂದುವರಿಸಿಕೊಂಡು ಬರುತ್ತೀರೋ ಅಥವಾ ಮುಂದಿನ ವರ್ಷದಿಂದ ತೆಗೆದುಹಾಕಬೇಕೆಂದು ತೀರ್ಮಾನ ಮಾಡಿದ್ದೀರೋ ?

ಶ್ರೀ ಎನ್. ರಾಚಯ್ಯ.—ಕೊಡಬೇಕೇ ಬೇಡವೇ ಎನ್ನುವ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಈ ಬಗ್ಗೆ ವರದಿಯನ್ನು ತರಿಸಿಕೊಂಡ ಮೇಲೆ ಯಾವುದನ್ನೂ ನಿರ್ಧಾರಮಾಡುತ್ತೇವೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ನೀರಾ ಸೆಂಟರುಗಳನ್ನು ರದು ಮಾಡಬೇಕೆಂದು ಪ್ರೊಹಿಬಿಷನ್ ಬೋರ್ಡಿನವರು ತೀರ್ಮಾನ ಮಾಡಿದರೂ ಇದುವರೆಗೆ ಜಾರಿಗೆ ತರದೆ ಇರಲು ಕಾರಣವೇನು ?

ಶ್ರೀ ಎನ್. ರಾಚಯ್ಯ.—ಪ್ರೊಹಿಬಿಷನ್ ಬೋರ್ಡ್ ನವರು ಶಿಫಾರಸ್ಸು ಮಾಡಿದ ಮೇಲೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು.

ಶ್ರೀ ಎನ್ ಜಿ. ನರಸಿಂಹೇಗೌಡ.—ಕೆಲವು ಪುಢಾರಿಗಳು ಇದರ ಮುಖಾಂತರ ನಂಪಾದನೆ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ.—ಅದು ಸರ್ಕಾರದ ಗಮನಕ್ಕೆ ಬಂದದ್ದರಿಂದ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಉದ್ದೇಶಪಟ್ಟಿರುವುದು.

ಶ್ರೀ ಕುಂದೂರು ರುದ್ರಪ್ಪ.—ಮೂಲ ಉದ್ದೇಶಕ್ಕೆ ಧಕ್ಕೆ ಬಂದು ನೀರಾ ಹೆಂಡವಾಗಿ ಮಾರಾಟ ಮಾಡುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಆಗಲೇ ಶ್ರೀ ನರಸಿಂಹೇಗೌಡರ ಪ್ರಶ್ನೆಗೆ ಉತ್ತರ ಹೇಳಿದ್ದಾರೆ; ಬೇರೆ ಪ್ರಶ್ನೆಯನ್ನು ಕೇಳಿ.

ಶ್ರೀ ಕುಂದೂರು ರುದ್ರಪ್ಪ.—ನೀರಾ ಎಂಬುದು ಹೆಂಡವಾಗಿ ದುರುಪಯೋಗ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ.—ಕೆಲವು ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ಬಂದು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಈಗಾಗಲೆ ಉತ್ತರ ಹೇಳಿದ್ದೇನೆ.

ಶ್ರೀ ಕುಂದೂರು ರುದ್ರಪ್ಪ.—ನೀರಾ ದುರುಪಯೋಗವಾಗುತ್ತಿದೆ, ಆದರಿಂದ ಮೂಲ ತತ್ವಕ್ಕೆ ಧಕ್ಕೆ ಬರುತ್ತದೆ. ಆದುದರಿಂದ ಅದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಮೊದಲೆ ಉತ್ತರ ಹೇಳಿದ್ದೇನೆ.

ಶ್ರೀಮತಿ ಸುಶೀಲಾ ಬಾಯಿ ಹೀರಾಚಂದ್‌ಷಾ.—ಮುಂಬೈ ಕರ್ನಾಟಕದೊಳಗೆ ನೀರಾ ಕೇಂದ್ರ ಒಳ್ಳೆಯ ರೀತಿಯಲ್ಲಿ ನಡೆದಿದೆ. ನವಂಬರ್ ತಿಂಗಳಿನಲ್ಲಿ ಲೈಸನ್ಸ್ ಸಿಕ್ಕುತ್ತದೆ ಎಂದು ಮೈಸೂರು ಸರ್ಕಾರಕ್ಕೆ ಹಣ ತುಂಬಿದ ಮೇಲೆ ಲೈಸನ್ಸ್ ಕೊಡುವುದಕ್ಕೆ ತಕರಾರು ಮಾಡುತ್ತಾ ಇರುವುದು ನಿಜವೇ ?

ಶ್ರೀ ಎನ್. ರಾಚಯ್ಯ.—ಸರ್ಕಾರಕ್ಕೆ ಆತರಹದ ಪತ್ರ ಬಂದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಹಿಂದೆ ಸೇಂದಿ ಮರಗಳಿಂದ ಸರ್ಕಾರಕ್ಕೆ ಎಷ್ಟು ವರಮಾನ ಬರುತ್ತಿತ್ತೋ ಅಷ್ಟೇ ವರಮಾನ ಈ ನೀರಾದಿಂದಲೂ ಬರುತ್ತದೆಯೇ ?

ಶ್ರೀ ಎನ್. ರಾಚಯ್ಯ.—ನೀರಾ ಕೇಂದ್ರಗಳನ್ನ ಲಾಭದ ದೃಷ್ಟಿಯಿಂದ ತೆಗೆಯುತ್ತಿಲ್ಲ; ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ ಕೊಡುವ ಉದ್ದೇಶದಿಂದ ಮಾಡುತ್ತಿದ್ದೇವೆ.

Sri B. S. SHANKARAPPA.—What is the income you get by having Neera ?

ಅಧ್ಯಕ್ಷರು.—ಇಲ್ಲ ಎಂದು ಹೇಳಿದರು.

ಶ್ರೀ ಎ. ಮುನಿಯಪ್ಪ.—ನಿರುದ್ಯೋಗಿಗಳಿಗೆ ಕೆಲಸ ಒದಗಿಸಿ ಕೊಡುವುದು ಎಂದು ಹೇಳಿದಿರಿ. ಈ ಡಿಗರ ನೊಸ್ಕೆಟ ಎಂದು ರಿಜಿಸ್ಟರ್ ಮಾಡಿ, ಬೇರೆ ಜಾತಿಯವರು ಇದರಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ.—ಖಾದಿ ಮತ್ತು ವಿಲೇಜ್ ಇಂಡಸ್ಟ್ರಿಜ್ ಬೋರ್ಡಿನವರು ಇದನ್ನು ಮಾಡುತ್ತಾ ಇರುವುದರಿಂದ ಸರ್ಕಾರಕ್ಕೆ ಸರಿಯಾಗಿ ಗೊತ್ತಿಲ್ಲ. ಎಲ್ಲವನ್ನೂ ಪರಿಶೀಲನೆಮಾಡಿ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ.

ಶ್ರೀ ಐ. ನಾರಾಯಣಗೌಡ.—ನೀರಾ ಕೇಂದ್ರಗಳನ್ನು ತೆಗೆದ ಮೇಲೆ ಕಳ್ಳಭಟ್ಟಿ ತಯಾರಿ ಬಹಳ ಮಟ್ಟಿಗೆ ಕಡಮೆಯಾಗಿರುವುದರಿಂದ ಈಗಾಗಲೇ ಪಾನ ನಿರೋಧವನ್ನು ಜಾರಿಗೆ ತಂದಿರುವ ಪ್ರತಿಯೊಂದು ಜಿಲ್ಲೆಯಲ್ಲೂ ಇದನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ರಾಚಯ್ಯ.—ಈ ಪ್ರಶ್ನೆಗಾಗಲೇ ನಾನು ಉತ್ತರ ಹೇಳಿದ್ದೇನೆ.

Sri Y. MANJAYA SHETTY.—May I know whether the Government has received innumerable representations from the tappers in South Kanara District to open more Neera Centres to relieve them from unemployment ? If so, what action have they taken in this regard ?

Sri N. RACHIAH.—There are already Centres functioning in South Kanara District.

ಶ್ರೀ ಟಿ. ಹನುಮಯ್ಯ.—ಈ ನೀರಾ ಕೇಂದ್ರಗಳನ್ನು ಕೇವಲ ಡಿಗರ ಜಾತಿಗೆ ಸೇರಿರತಕ್ಕವರೇ

ಅಲ್ಲದೇ ಬೇರೇ ಜಾತಿಯವರೂ ಸಹ ಸೂಸೈಟಗಳನ್ನು ಮಾಡಿಕೊಂಡು ಇದನ್ನು ದುರುಪಯೋಗ ಮಾಡುತ್ತಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ರಾಚಯ್ಯ.—ಕೆಲವು ಸಂದರ್ಭಗಳಲ್ಲಿ ಗಮನಕ್ಕೆ ಬಂದಿದೆಯೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗ ತಾನೆ ಮಾನ್ಯ ಮುಂತ್ರಿಗಳು ಈ ನೀರಾ ಪಾನವನ್ನು ಸರ್ಕಾರದವರು ಒಂದು ಲಾಭದಾಯಕ ದೃಷ್ಟಿಯಿಂದ ನಡೆಸುತ್ತಿಲ್ಲ ; ಇದನ್ನು ರಿಯಾಯಿತಿದರದಲ್ಲಿ ಮಾರಾಟ ಮಾಡಲಾಗುತ್ತಿದೆಯೆಂಬ ಅರ್ಥ ಬರುವಂತೆ ಹೇಳಿದರು. ಹಾಗಾದರೆ ಈ ಪಾನಕ್ಕೇನಾದರೂ ಧಾರಣೆಯನ್ನು ನಿಗದಿ ಮಾಡಿದ್ದಾರೆಯೇ ?

ಶ್ರೀ ಎಚ್. ರಾಚಯ್ಯ.—ಆ ಮಾಹಿತಿ ಈಗ ನಮ್ಮಕ್ಕೆ ನನ್ನಲ್ಲಿಲ್ಲ.

ಶ್ರೀಮತಿ ಅನ್ನಪೂರ್ಣಬಾಯಿ-ರಾಗಚೆ.—ಕಲ್ಯಾಣದಲ್ಲಿ ನೀರಾ ಕೇಂದ್ರ ತೆರೆಯಲು ಸರ್ಕಾರಕ್ಕೆ ಮನವಿಗಳೇನಾದರೂ ಬಂದಿವೆಯೇ ?

ಶ್ರೀ ಎಚ್. ರಾಚಯ್ಯ.—ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಈ ನೀರಾ ಕೇಂದ್ರ ತೆರೆಯಲು ಖಾದಿ ಬೋರ್ಡಿಗೆ ಒಂದು ವರ್ಷದ ಹಿಂದೆಯೇ ಲೈಸೆನ್ಸಿಗೆ ದುಡ್ಡು ಕಟ್ಟಿದ್ದರೂ, ಅವರು ನೀವು ಇದನ್ನು ಮಾಡಿಲ್ಲ. ಅದನ್ನು ಮಾಡಿಲ್ಲ ಎಂದು ನೆಪಹೇಳಿಕೊಂಡು ಆ ಖಾದಿ ಬೋರ್ಡಿನವರು ದುಡ್ಡು ತಿಂದು ಹಾಕಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಾರದಿರಲು ಕಾರಣವೇನು ?

ಶ್ರೀ ಎಚ್. ರಾಚಯ್ಯ.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಾರದಿರುವದೇ ಕಾರಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ತಾವು ನೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎಚ್. ರಾಚಯ್ಯ.—ಆ ವಿಚಾರ ಬಂದ ಮೇಲೆ ನೋಡೋಣ.

ಶ್ರೀ ಜಿ. ಎಚ್. ಪುಟ್ಟಣ್ಣ.—ಖಾದಿ ಬೋರ್ಡಿನವರು ಈ ನೀರಾ ಕೇಂದ್ರಗಳಿಗೆ ಲೈಸೆನ್ಸ್ ಕೊಡತಕ್ಕ ಅಧಿಕಾರವನ್ನು ಅವರಿಗೆ ಯಾರು ಕೊಟ್ಟರು ?

ಶ್ರೀ ಎಚ್. ರಾಚಯ್ಯ.—ಸರ್ಕಾರದವರೇ ಕೊಟ್ಟಿದ್ದರು. ಆದರೆ ಅವರು ತಿಳಿಸಿದ್ದ ಸಂಖ್ಯೆಗಿಂತ ಹೆಚ್ಚು ಕೇಂದ್ರಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಅದನ್ನೀಗ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

———

Pick-ups in Hiriyur Taluk.

*Q.—111. Sri K. KENCHAPPA (Hiriyur).—

Will the Government be pleased to state :—

(*a*) the names of pick-ups constructed in Hiriyur taluk for the last five years; (details regarding estimated cost, cost incurred, date when they breached, date of completion, proposed area to be irrigated, actual area being irrigated may be furnished) ;

(*b*) the names of fresh pick-ups and repairs to breached pick-ups taken up together with the date of commencing them ;

(*c*) out of the above pick-ups the names of pick-ups that are fully functioning and partially functioning ?

*A.— Sri H. M. CHANNABASAPPA (Minister for Public Works and Electricity).—

(*a*) One pick-up near T. Nagenahalli—particulars are as below :—

Estimated cost	Rs. 3,600
Cost incurred	Rs. 2,501 (up-to-date)
Date when they breached	Not breached
Date of completion	Nearing completion.

	A. G.
Proposed area to be irrigated	18 00
Actual area being irrigated	18 01

(*b*) Only one fresh pick up is taken up during the above period as noted below :

Pick up near T. Nagenahalli.
Date of commencement : February 1958

No works under repairs to breached pick-ups have been taken up.

(*c*) Pick-up near T. Nagenahalli is fully functioning.

ಶ್ರೀ ಕೆ. ಕೆಂಚಪ್ಪ.—ಸರ್ಕಾರದವರು ಕಳೆದ ಐದು ವರ್ಷಗಳಿಂದ ಕಟ್ಟಿದ ಪಿಕ್-ಅಪ್ ಒಂದೇ ಒಂದು. ಅದು ಒಡೆದು ಹೋಗಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಕಳೆದ ಐದು ವರ್ಷಗಳಿಂದ ಹುಲುಗಲಕೋಟಿ ; ಬಗ್ಗನಡು ; ಕೂಡ್ಲಹಳ್ಳಿ ಮತ್ತು ಎಳನಡು ಗ್ರಾಮಗಳ ಪಿಕ್-ಅಪ್‌ಗಳು ಒಡೆದು ಹೋಗಿದ್ದರೂ ಅವುಗಳನ್ನು ಏತಕ್ಕಾಗಿ ಇನ್ನೂ ಕಟ್ಟಿಲ್ಲ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಎಳನಡುವಿನ ಪಿಕ್-ಅಪ್ ಒಡೆದುಹೋಗಿಲ್ಲ. ಅಲ್ಲಿ ಒಂದು ಹೊಸ ಪಿಕ್-ಅಪ್ ಕಟ್ಟಲು ಆಲೋಚನೆ ಮಾಡುತ್ತಿದ್ದೇವೆ. ಇನ್ನು ಹುಲುಗಲ ಕೋಟಿ ಹತ್ತಿರ ಕಟ್ಟಬೇಕೆಂದಿರುವ ಪಿಕ್-ಅಪ್‌ನ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲಾಗುತ್ತಿದೆ.

ಶ್ರೀ ಕೆ. ಕೆಂಚಪ್ಪ.—ಹುಲುಗಲ ಕೋಟಿ ಪಿಕ್-ಅಪ್ ಅಂದಾಜನ್ನು ಎಷ್ಟು ದಿವಸಗಳಿಂದ ತಯಾರಿಸುತ್ತಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ಕೆಲಸ ನಡೆಯುತ್ತಿದೆ.